ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **639/2023**

| | | |
|---|---|---|
| ಸಾಕ್ಷಿಯ ಹೆಸರುಃ | ಪ್ರಕಾಶ | |
| ತಂದೆಯ ಹೆಸರುಃ | ಶಿವರಾಮಚಾರ್ಯ | DW.1 |
| ವಯಸ್ಸುಃ | 58 ವರ್ಷ | ಪ್ರಮಾಣೀಕರಿಸಿದ ದಿಃ 17.12.2025 |
| ಉದ್ಯೋಗಃ | ಗಾರೆ ಕೆಲಸದ ಗುತ್ತಿಗೆದಾರರು | |
| ವಾಸ ಸ್ಥಳಃ | ಅರವತೊಕ್ಕಲು ಗ್ರಾಮ,ಗೋಣಿಕೊಪ್ಪ ಹೋಬಳಿ, ಪೊನ್ನಂಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. | |

ಮುಖ್ಯ ವಿಚಾರಣೆಃ ಆರೋಪಿಯವರಿಂದಃ

ನನಗೆ ಬೂದಿತಿಟ್ಟು ಗ್ರಾಮದಿಂದ ಮಾದೇಶ ಎಂಬುವವರು ಗಾರೆ ಕೆಲಸವನ್ನು ಮಾಡಲು ಜನರನ್ನು ಕರೆದುಕೊಂಡು ಬರುತ್ತಿದ್ದರು. ನಾನು ಮಾದೇಶ ರವರಿಗೆ ತಿಂಗಳಗೆ ಒಮ್ಮೆ ಹಣವನ್ನು ಪಾವತಿ ಮಾಡುತ್ತಿದ್ದೆ. ನಾನು ಹಣದ ಭದ್ರತೆಗಾಗಿ ಖಾಲಿ ಚೆಕ್ ಗೆ ಸಹಿಯನ್ನು ಮಾಡಿ ನೀಡಿದ್ದೆ. ಕೆಲಸಗಳು ಮುಗಿದ ನಂತರ ನಾನು ಅವರುಗಳ ಹಣವನ್ನು ಸಂದಾಯ ಮಾಡಿ, ಮಾದೇಶ ರವರನ್ನು ನನ್ನ ಚೆಕ್ ನ್ನು ಹಿಂತಿರುಗಿಸುವಂತೆ ಕೇಳಿದಾಗ, ಅವರು ಚೆಕ್ ಕಳೆದು ಹೋಗಿದೆ ಎಂದು ತಿಳಿಸಿರುತ್ತಾರೆ.

2. ಕೆಲವು ದಿನಗಳ ನಂತರ ನನಗೆ ವಕೀಲ ಮೂಲಕ ನೋಟಿಸ್ನ ನ್ನು ಕಳುಸಿದ್ದರು. ನಂತರ ನಾನು ಅವರ ಬೂದಿತಿಟ್ಟು ನಲ್ಲಿರುವ ಅವರ ಮನೆಗೆ ಹೋಗಿ, ಸದರಿ ವಿಚಾರವನ್ನು ಹೇಳಲಾಗಿ, ಅವರು ಅದರ ಬಗ್ಗೆ ನನಗೆ ಏನು ಗೊತ್ತಿಲ್ಲ ಎಂದು ಹೇಳಿದರು.

3. ನಂತರ ನಾನು ಈ ವಿಚಾರವನ್ನು ನಮ್ಮ ವಕೀಲರ ಗೆ ಹೇಳಿ, ಸದರಿ ನೋಟಿಸ್ ಗೆ ಮರು ಉತ್ತರವನ್ನು ನೀಡಿರುತ್ತೇವೆ.

4. ವಸಂತಮ್ಮ ರವರಿಗೂ ಹಾಗೂ ನನಗೆ ಯಾವುದೇ ಹಣದ ವ್ಯವಹಾರ ಆಗಿಲ್ಲ. ಅವರಿಂದ ನಾನು ಯಾವುದೇ ಹಣವನ್ನು ಪಡೆದುಕೊಂಡಿಲ್ಲ. ಅವರು ನನಗೆ ವಯಕ್ತಿಕವಾಗಿ ಸಹ ಪರಿಚಯವಿಲ್ಲ. ವಸಂತಮ್ಮ ರವರು ನನ್ನ ವಿರುದ್ದ ಸುಳ್ಳು ದೂರನ್ನು ನೀಡಿ, ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದಾರೆ. ಆದ್ದರಿಂದ ಈ ದೂರನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆರೋಪಿರ  ಪರ ವಕೀಲರು ಮುಂದು ವರೆದ ಮುಖ್ಯ ವಿಚಾರಣೆಗೆ   ಸಮಯ ಕೋರಿದ್ದು, ಸಮಯ ನೀಡಿ ಮೂಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ